**ಪಿಡಬ್ಲೂ.1: ಬಾಲಚಂದ್ರ ರೆಡ್ಡಿ.,**

**ದಿನಾಂಕಃ 03.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಡಿ.ಆರ್ ವಕೀಲರಿಂದಃ**

ಆರೋಪಿ ನನಗೆ 5 ವರ್ಷಗಳಿಂದ ಪರಿಚಯ. ಅದರ್ಶ್ ಎಂಬುವವರ ಮುಖಾಂತರ ಆರೋಪಿ ಪರಿಚಯವಾದರು. ಈ ಮೊದಲು ಆರೋಪಿಯು ನನ್ನಿಂದ 65 ಲಕ್ಷದ ಕಟ್ಟಡದ ಸಾಮಾಗ್ರಿಗಳನ್ನು ಖರೀದಿ ಮಾಡಿದ್ದರು. ಆರೋಪಿಯೇ ಖುದ್ದಾಗಿ ಖರೀದಿ ಮಾಡಿದ್ದರು. ಆರೋಪಿಯು 65 ಲಕ್ಷದ ಸಾಮಗ್ರಿ ಖರೀದಿ ಮಾಡಿದ ಬಗ್ಗೆ ಆರೋಪಿಯಿಂದ ಅಗ್ರಿಮೆಂಟ್ ಮಾಡಿಕೊಂಡಿದ್ದೆವು. ಆ ಅಗ್ರಿಮೆಂಟನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವ್ಯವಹಾರವು ದಿ.05.09.2020 ರಂದು ನಡೆದಿತ್ತು. ಆ ವೇಳೆಯಲ್ಲಿ ನಾನು ಆರೋಪಿ ಮತ್ತು ಆರೋಪಿಯ ಗಂಡ ವ್ಯವಹಾರ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ಆರೋಪಿಯ ಜೊತೆ ವ್ಯವಹಾರ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯೇ ಮುಂದೆ ನಿಂತು ವ್ಯವಹಾರ ಮಾಡಿದ್ದರು ಎಂದು ನುಡಿಯುತ್ತಾರೆ.

**2.** ಈ ಮೊದಲು ಕೆ.ಆರ್. ಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೀರಿ ಎಂದರೆ ಸರಿ. ಆ ದೂರಿನಲ್ಲಿ 2020 ರಲ್ಲಿ ವ್ಯವಹಾರವಾಗಿತ್ತು ಎಂದು ನಮೂದಿಸಿದ್ದೀರಾ ಎಂದರೆ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಪಿರ್ಯಾದಿನಲ್ಲಿ ಮದುಗೌಡ ಮತ್ತು ವಿರೇಶ್ ಎಂಬುವವರು ಚೆಕ್ಕಿನಲ್ಲಿ ಆರೋಪಿಯ ಸಹಿಯನ್ನು ಹಾಕಿಸಿಕೊಟ್ಟರು ಎಂದು ನಮೂದಿಸಿದ್ದೀರಿ ಎಂದರೆ ಸರಿ. ಆ ವ್ಯವಹಾರವು 21.01.2020 ಮತ್ತು 06.02.2021 ರಲ್ಲಿ ನಡೆದಿತ್ತು ಎಂದು ದೂರಿನಲ್ಲಿ ನಮೂದಿಸಿರುತ್ತೀರಿ ಎಂದರೆ ಸರಿ. ದಿ.21.09.2020 ರಂದು 6 ಚೆಕ್ಕುಗಳನ್ನು ಪಡೆದಿದ್ದು ಸದರಿ ಚೆಕ್ಕುಗಳು ದಿನಾಂಕಗಳನ್ನು ನಮೂದಿಸಿ ನೀಡಿದಂತಹ

ಚೆಕ್ಕುಗಳಾಗಿದ್ದವು ಎಂದು ನಮೂದಿಸಿದ್ದೀರಿ ಎಂದರೆ ಸರಿ. ನ್ಯಾಯಾಲಯದ ಮುಂದೆ ಚೆಕ್ ನಂಬರ್ 000466 ಹಾಜರುಪಡಿಸಿರುತ್ತೀರಿ ಎಂದರೆ ಸರಿ. ಎರಡು ಬೇರೆ ಬೇರೆ ದಿನಾಂಕಗಳಂದು ಆರೋಪಿಯಿಂದ ಒಂದು ಬಾರಿ 5 ಚೆಕ್ಕುಗಳನ್ನು ಮತ್ತು ಮತ್ತೊಂದು ಬಾರಿ 6 ಚೆಕ್ಕುಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿ. ಈ ಮೇಲ್ಕಂಡ ವಿಷಯಗಳನ್ನು ನಿಮ್ಮ ನೋಟೀಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ನಗದು ಮುಖಾಂತರ ಹಣ ನೀಡಿದ್ದೆನು ಎಂದು ನಮೂದಿಸಿರುತ್ತೀರಿ ಎಂದರೆ ಸರಿ. ಯಾರ ಸಮಕ್ಷಮ ನಗದು ಮುಖಾಂತರ ಹಣವನ್ನು ಆರೋಪಿಗೆ ನೀಡಿದ್ದೀರಿ ಎಂದರೆ ಸಾಕ್ಷಿಯು ಆರೋಪಿಗೆ ನಗದಾಗಿ ಹಣ ನೀಡುವಾಗ ನಾನು ಮತ್ತು ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನನ್ನ ಬಳಿ ಹಣ ಇದ್ದ ವಿಷಯ ತಿಳಿದಿದ್ದ ಕಾರಣ ಆಕೆ ತನಗೆ ಹುಷಾರಿಲ್ಲ ಹಾಗೂ ಜರೂರಾಗಿ ಹಣ ಬೇಕು ಎಂದು ಕೇಳಿ ನನ್ನಿಂದ ಹಣ ಪಡೆದುಕೊಂಡರು ಎಂದು ನುಡಿಯುತ್ತಾರೆ. ಆರೋಪಿ ಹಣ ಕೇಳಿದ ದಿನಾಂಕಕ್ಕೆ ನಿಮ್ಮ ಬಳಿ 10 ಲಕ್ಷ ರೂ. ಇದ್ದ ಬಗ್ಗೆ ದಾಖಲೆಗಳಿವೆಯೇ ಎಂದರೆ ಸಾಕ್ಷಿಯು ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಹಣದ ವ್ಯವಹಾರ ಮಾಡಲು ನಿಮಗೆ ಲೈಸೆನ್ಸ್ ಇದೆಯೇ ಎಂದರೆ ಸಾಕ್ಷಿಯು ಲೈಸೆನ್ಸ್ ಇರುವುದಿಲ್ಲ ಎಂದು ನುಡಿಯುತ್ತಾರೆ.

**3.** ನಿ.ಪಿ.1 ರ ಚೆಕ್ಕಿನಲ್ಲಿ ನೀವೇ ಬರವಣಿಗೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಆರೋಪಿಯು ಖಾಲಿ ಚೆಕ್ಕನ್ನು ನೀಡಿದ್ದರು ಎಂದು ಹೇಳಿರುವುದಿಲ್ಲ. ನಿಮ್ಮ ಫಿರ್ಯಾದಿನ 4ನೇ ಪುಟದಲ್ಲಿ ಆರೋಪಿಯು ದಿನಾಂಕವನ್ನು ನಮೂದಿಸಿ ಚೆಕ್ಕನ್ನು ಮಾತ್ರ ನೀಡಿದ್ದರು ಎಂದು ನಮೂದಿಸಿದ್ದೀರಿ ಎಂದರೆ ಸಾಕ್ಷಿಯು ದಿನಾಂಕ ಮತ್ತು ಮೊತ್ತವನ್ನು ನಮೂದಿಸಿ ನೀಡಿದ್ದರು ಎಂದು ನುಡಿಯುತ್ತಾರೆ. ಕೆ.ಆರ್. ಪುರಂ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ದಿ.21.09.2020 ಎಂದು ಚೆಕ್ಕಿನಲ್ಲಿ ನಮೂದಾಗಿರುತ್ತದೆ ಎಂದು

**ಪಿಡಬ್ಲೂ.1: ಬಾಲಚಂದ್ರ ರೆಡ್ಡಿ.,**

ನಮೂದಿಸಿರುತ್ತೀರಿ ಎಂದರೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ರ ಚೆಕ್ ನಂಬರ್ 000466 ಆಗಿರುತ್ತದೆ. ನಿ.ಪಿ.1 ರಲ್ಲಿ ನಮೂದಿಸಿರುವ ದಿನಾಂಕ ಹಾಗೂ ಕೆ.ಆರ್. ಪುರಂ ಠಾಣೆಯಲ್ಲಿ ನೀಡಿದ ದೂರಿನಲ್ಲಿ ನಮೂದಿಸಿರುವ ದಿನಾಂಕದಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಆ ವೇಳೆಯಲ್ಲಿ ದಿನಾಂಕ ನಮೂದಿಸಿರಲಿಲ್ಲ, ಆರೋಪಿ ನಾನು ಹಣ ಕೊಟ್ಟಾಗ ಚೆಕ್ಕಿನಲ್ಲಿ ದಿನಾಂಕ ನಮೂದಿಸಿ ನೀಡಿದ್ದರು ಎಂದು ನುಡಿಯುತ್ತಾರೆ. ಕೆ.ಆರ್. ಪುರಂ ಠಾಣೆಯಲ್ಲಿ ನೀಡಿದ ದೂರಿನಲ್ಲಿ ವಿವಾದಿತ ಚೆಕ್ಕಿಗೆ ಸಂಬಂಧಿಸಿದಂತೆ ನಗದು ಮುಖಾಂತರ ಹಣ ನೀಡಿದ್ದೆನು ಎಂದು ನಮೂದಿಸಿರುವುದಿಲ್ಲ ಎಂದರೆ ಆ ವೇಳೆಯಲ್ಲಿ ನಾನು ಆರೋಪಿಗೆ ನಗದಾಗಿ ಹಣ ನೀಡಿರಲಿಲ್ಲ ಎಂದು ನುಡಿಯತ್ತಾರೆ. ಈ ಎಲ್ಲಾ ವಿಷಯವನ್ನು ನೋಟೀಸಿನಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ವಿಷಯವನ್ನು ನಾನು ವಕೀಲರಿಗೆ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ನೀನು ಮೇಲ್ಕಂಡ ವಿಷಯವನ್ನು ನಿಮ್ಮ ವಕೀಲರಿಗೆ ತಿಳಿಸದ ಕಾರಣ ನೋಟೀಸಿಲ್ಲಿ ನಮುದಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.